**ಸಾಕ್ಷಿಯನ್ನು ದಿನಾಂಕ: 21-06-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :- ವಾದಿ ಪರ ವಕೀಲರಾದ ಶ್ರೀ.ಬಿ.ಎಂ.ಬಿ. ವಕೀಲರಿಂದಃ**

ಪ್ರತಿವಾದಿ ಸಂಖ್ಯೆ 1(ಬಿ) ನಾಗರಾಜುರವರ ತಾಯಿಯ ಹೆಸರು ಮುನಿತಾಯಮ್ಮ ಮತ್ತು ತಂದೆಯ ಹೆಸರು ರಾಮಯ್ಯ ಎಂದರೆ ಸರಿ.

ನಾನು ರಾಮಯ್ಯ ಮತ್ತು ಇತರರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆಃ 852/2008 ನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯನ್ನು ವಿಭಾಗಕ್ಕಾಗಿ ಸಲ್ಲಿಸಿದ್ದೆ. ಸದರಿ ದಾವೆಯಲ್ಲಿ ವಾದ ಪತ್ರವನ್ನು ಸಲ್ಲಿಸಲು ನಾನು ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಭಾಗಾಂಶ ಬರಬೇಕು ಎಂದು ಸಲ್ಲಿಸಿದ್ದೆ. ಸದರಿ ದಾವೆಯು ಈ ದಾವೆಯ ಮೂಲ ವಾದಿ ರಾಮಯ್ಯನ ವಿರುದ್ಧ ವಜಾ ಆಗಿದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಆಗಿರುವ ಆದೇಶಗಳ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೂಲ ವಾದಿಯು ದಾವಾ ಆಸ್ತಿಯ ಮಾಲೀಕ ಹಾಗೂ ಆತ ಹಲವಾರು ವರ್ಷಗಳಿಂದ ದಾವಾ ಆಸ್ತಿಯ ಖುದ್ದು ಸ್ವಾಧೀನದಲ್ಲಿದ್ದು, ವ್ಯವಸಾಯ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಂದಾಯ ದಾಖಲೆಗಳು ವಾದಿಯ ಹೆಸರಿನಲ್ಲಿವೆ ಎಂದರೆ ಸರಿ. ವಾದಿಯ ದಾವಾ ಆಸ್ತಿಯ ಮೇಲಿನ ಒಡೆತನ ಮತ್ತು ಸ್ವಾಧೀನವನ್ನು ನಾವು ಪ್ರಶ್ನಿಸಿದ್ದರಿಂದ ಪ್ರಸುತ್ತ ದಾವೆಯನ್ನು ವಾದಿ ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಪೂರ್ವಕ್ಕೆಃ ಚಿಕ್ಕಣ್ಣನವರ ನಂಜುಂಡಪ್ಪನವರ ಜಮೀನು, ಪಶ್ಚಿಮಕ್ಕೆಃ ಚಿಕ್ಕಮುನಿಯಪ್ಪನ ಜಮೀನು, ಉತ್ತರ ಮತ್ತು ದಕ್ಷಿಣಕ್ಕೆಃ ಕಾಲುವೆ ಇದೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ಜಮೀನಿನ ಮಾಲೀಕರಾದ ಚಿಕ್ಕಮುನಿಯಪ್ಪ ನನ್ನ ಸಂಬಂಧಿಕ ಎಂದರೆ ಸರಿಯಲ್ಲ. ನಾನು ಮತ್ತು ಚಿಕ್ಕಮುನಿಯಪ್ಪ ಹಲವಾರು ವರ್ಷಗಳಿಂದ ನಿಕಟ ಸಂಬಂಧವನ್ನು ಹೊಂದಿದ್ದೇವೆ ಎಂದರೆ ಸರಿಯಲ್ಲ. ಸದರಿ ಚಿಕ್ಕಮುನಿಯಪ್ಪ ಪ್ರತಿ ದಿನ ನಮ್ಮ ಮನೆಗೆ ಭೇಟಿ ಮಾಡುತ್ತಾನೆ ಎಂದರೆ ಸರಿಯಲ್ಲ.

ನಮ್ಮ ಮನೆಯ ಮುಂದೆ ಗ್ರಾಮ ಠಾಣಾದ ಖಾಲಿ ಜಾಗ ಇದೆ ಎಂದರೆ ಸರಿ. ಸದರಿ ಜಾಗದಲ್ಲಿ ಒಂದು ಹುಣಸೆ ಮರ ಇದೆ ಎಂದರೆ ಸಾಕ್ಷಿಯು ಮೊದಲು ಇತ್ತು, ಈಗ ಇಲ್ಲ ಎಂದು ಹೇಳುತ್ತಾರೆ. ಸದರಿ ಹುಣಸೆ ಮರದ ಬಗ್ಗೆ ಚಿಕ್ಕಮುನಿಯಪ್ಪ ಮತ್ತು ಕಾಕಪ್ಪನ ನಡುವೆ ಇದೇ ನ್ಯಾಯಾಲಯದಲ್ಲಿ ಒಂದು ದಾವೆ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಕಾಕಪ್ಪ ಎನ್ನುವವರು ನನ್ನ ತಾತ. ಕಾಕಪ್ಪ ಎನ್ನುವವರು ನನಗೆ ಸಂಬಂಧಿಕರಲ್ಲ. ಸದರಿ ದಾವೆಯಲ್ಲಿ ಚಿಕ್ಕಮುನಿಯಪ್ಪನ ಪರವಾಗಿ ನಾನು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗನಾದ 2 ನೇ ಪ್ರತಿವಾದಿ ಪಂಚಾಯತಿ ಸದಸ್ಯ ಆಗಿದ್ದ ಮತ್ತು ಈಗಲೂ ಸದಸ್ಯನಾಗಿದ್ದಾನೆ ಎಂದರೆ ಸರಿ. ಚುನಾವಣಾ ಪೂರ್ವದಲ್ಲಿ ಚಿಕ್ಕಮುನಿಯಪ್ಪ ಎಲ್ಲಾ ಪ್ರಭಾರವನ್ನು ವಹಿಸಿದ್ದ ಎಂದರೆ ಸರಿಯಲ್ಲ. ಈಗಲೂ ಸಹ ಚಿಕ್ಕಮುನಿಯಪ್ಪ ನಮ್ಮ ಕುಟುಂಬದ ಆಗು-ಹೋಗುಗಳಲ್ಲಿ ಭಾಗಿಯಾಗುತ್ತಿದ್ದಾನೆ ಎಂದರೆ ಸರಿಯಲ್ಲ. ಆದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಕೆಲವು ಮಹತ್ವದ ಅಂಶಗಳು ಮತ್ತು ದಾಖಲೆಗಳ ಮೇಲೆ ಪಾಟೀ ಸವಾಲು ಮಾಡಲು ಕಾಲಾವಕಾಶ ಬೇಕು ಎಂದು ವಾದಿ ಪರ ವಕೀಲರು ಕೇಳಿದ್ದರಿಂದ ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು).

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**